# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/295/11-12

ದಿನಾಂಕ :05-08-2016

ಉಪಸ್ಥಿತರು: ಶ್ರೀ ಲೋಕೇಶ್ ಪಿ.ಎನ್ (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಎಲ್ ಪಾಂಡುರಂಗ ತಂದೆ ಎಲ್ ತಂಬಣ್ಣ ಪರವಾಗಿ GPA ಶ್ರೀ ಹೆಚ್. ಮಹಮ್ಮದ್ ಆಸೀಫ್ ತಂದೆ ದಿ ದರ್ವೇಷ್ ಅಹ್ಮದ್, ಬಳ್ಳಾರಿ<br><br>(ಶ್ರೀಮತಿ ಹಸೀನಾ ಬಾನು, ವಕೀಲರು, ಬಳ್ಳಾರಿ) | 1. ತಹಶೀಲ್ದಾರರು, ಬಳ್ಳಾರಿ<br>2. ಕಂದಾಯ ನಿರೀಕ್ಷಕರು, ಬಳ್ಳಾರಿ<br>3. ಶ್ರೀ ಷಾ ಸಾಬ್ ತಂದೆ ನಬೀ ಸಾಬ್<br>4. ಶ್ರೀಮತಿ ಯರ್ರೆಮ್ಮ ಗಂಡ ಅಂಜಿನೇಯ್ಯ<br>5. ಎನ್ ಶ್ರೀನಿವಾಸುಲು ತಂದೆ ಆಂಜಿನೇಯುಲು<br>6 ಶ್ರೀಮತಿ ಭೂದೇವಿ ಗಂಡ ಟಿ. ಲಕ್ಷ್ಮಣ, ಹಲಕುಂದಿ ಗ್ರಾಮ, ಬಳ್ಳಾರಿ<br>(R4 - ಶ್ರೀ ಡಿ ಪಾಂಡುರಂಗ, ವಕೀಲರು, ಬಳ್ಳಾರಿ) |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಹಲಕುಂದಿ | 291/ಬಿ | 11.00 |

-@@@-

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ತಹಶೀಲ್ದಾರರು, ಬಳ್ಳಾರಿ ಇವರ ಆದೇಶ ಸಂ/ಕಂ/ಮರುವಿಚಾರಣೆ/02, 83/10-11 ದಿನಾಂಕ 23/02/2011 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 30-09-2011, 13-07-2012, 04-09-2012, 17-12-2013, 15-05-2015, 06-11-2015, ಮತ್ತು 05-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳಪರ ವಕೀಲರು ದಿನಾಂಕ: 05-08-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಹಲಕುಂದಿ ಗ್ರಾಮದ ಸ.ನಂ 291/ಬಿ ವಿಸ್ತೀರ್ಣ: 11.00 ಎಕರೆ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಬಳ್ಳಾರಿ ಇವರ ಆದೇಶ ಸಂ/ಕಂ/ಮರುವಿಚಾರಣೆ/02, 83/10-11 ದಿನಾಂಕ 23/02/2011 ರ ಪ್ರಶ್ನಿತ ಆದೇಶಕ್ಕೆ ಸಂಬಂಧಿಸಿದಂತೆ ಪ್ರಸ್ತಾಪಿತ ಜಮೀನಿನ ವಿವಾದವನ್ನು ಈ ನ್ಯಾಯಾಲಯದ ಹೊರಗೆ ಇಬ್ಬರೂ ಪಕ್ಷಗಾರರು ಇತ್ಯಾರ್ಥ ಪಡಿಸಿಕೊಂಡಿರುವುದಾಗಿ ಹೇಳಿ ಅರ್ಜಿಸಲ್ಲಿಸಿದ್ದನ್ನು ಪರಿಗಣಿಸಿ ಪ್ರಕರಣವನ್ನು ಮುಕ್ತಾಯಗೊಳಿಸುವ ಕುರಿತು ಈ ಕೆಳಕಂಡ ಆದೇಶ.

## :: ಆದೇಶ ::

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಬಳ್ಳಾರಿ ತಾಲ್ಲೂಕಿನ ಹಲಕುಂದಿ ಗ್ರಾಮದ ಸ.ನಂ 291/ಬಿ ವಿಸ್ತೀರ್ಣ: 11.00 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಾದಿಪರ ವಕೀಲರು ಸಲ್ಲಿಸಿರುವ ಮೆಮೋ (NOT PRESS MEMO) ರ ಮೇಲ್ಮನವಿಯನ್ನು ಪರಿಗಣಿಸಿ ಇದೇ ಹಂತದಲ್ಲಿ ಮುಕ್ತಾಯಗೊಳಿಸುತ್ತಾ; ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ: 03-09-2011 ರ ಈ ನ್ಯಾಯಾಲಯದ ತಡೆಯಾಜ್ಞೆ ಆದೇಶವನ್ನು ತೆರವುಗೊಳಿಸಿ, ಈ ಪ್ರಕರಣದ ವಿಚಾರಣೆಯನ್ನು ಈ ಹಂತದಲ್ಲಿಯೇ ವಜಾಗೊಳಿಸಿ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳೀ, ಬರೆಯಿಸಿ, ತಪ್ಪುಗಳನ್ನು ತಿದ್ದಿ ದಿನಾಂಕ: 05-08-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

Recd copy
Advt for
ದಾಖಲಿಸಲಾಗಿದೆ.
17/8/16

ಸಹಾಯಕ ಆಯುಕ್ತರು
ಬಳ್ಳಾರಿ.

ಪ್ರತಿಯನ್ನು ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ತಹಶೀಲ್ದಾರು ಬಳ್ಳಾರಿ ಇವರಿಗೆ